ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 114-121.
©*IIMRD*, Mysuru.
IIMRD JOURNALS

www.iimrd.com

# ಬುಡಕಟ್ಟು ಸಮುದಾಯದ ಆರ್ಥಿಕ ಜೀವನದ ಮೇಲೆ ಅರಣ್ಯ ಹಕ್ಕು ಕಾಯ್ದೆಯ ಪಾತ್ರ

**ಕುಮಾರಸ್ವಾಮಿ ಎ.ಎನ್.* ಮತ್ತು ಪ್ರೊ.ಅನ್ನಪೂರ್ಣ. ಎಂ..****

*ಸಂಶೋಧನಾ ವಿದ್ಯಾರ್ಥಿ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ವಿಶ್ರಾಂತ ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***ಸಾರಾಂಶ: (Abstract)***

*ಭಾರತದಲ್ಲಿ 705 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿಸಲಾಗಿದೆ. ಇವರು ತಮ್ಮದೇಯಾದ ಆಚಾರ–ವಿಚಾರ, ಉಡುಗೆ–ತೊಡುಗೆ, ಆಹಾರ ಪದ್ಧತಿ ಮತ್ತು ನಂಬಿಕೆಗಳೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಬುಡಕಟ್ಟು ಅಭಿವೃದ್ಧಿಯ ಹೆಸರಿನಲ್ಲಿ ಅನುಷ್ಠಾನಗೊಳಿಸಿದ ಹಲವಾರು ಯೋಜನೆಗಳು ಬುಡಕಟ್ಟು ಜನರ ಜೀವನಕ್ಕೆ ಮಾರಕವಾಗಿ ಪರಿಣಮಿಸಿದವು. ಅವುಗಳಲ್ಲಿ ಪ್ರಮುಖವಾದದ್ದು 1972ರ ವನ್ಯಜೀವಿ ಕಾಯ್ದೆ ಮತ್ತು ಅಣೆಕಟ್ಟುಗಳ ನಿರ್ಮಾಣ, ಹುಲಿ ಯೋಜನೆ, ವನ್ಯಜೀವಿ ಧಾಮ ಘೋಷಣೆ, ಅರಣ್ಯ ಸಂರಕ್ಷಣೆ ಕಾಯ್ದೆ, ರಾಷ್ಟ್ರೀಯ ಉದ್ಯಾನವನಗಳ ನಿರ್ಮಾಣ ಇತ್ಯಾದಿ. ಈ ಕಾಯ್ದೆಗಳು ಅನುಷ್ಠಾನಕ್ಕೆ ಬಂದ ನಂತರ ಅರಣ್ಯದೊಳಗೆ ವಾಸಿಸುತ್ತಿದ್ದ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲಾಯಿತು ಹಾಗೂ ಅವರಿಗೆ ಪುನರ್ ವಸತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆದರೆ ಆ ಪುನರ್ ವಸತಿ ಕೇಂದ್ರಗಳು ಮೂಲ ಸೌಲಭ್ಯಗಳ ಕೊರತೆಯಿಂದಾಗಿ ಬುಡಕಟ್ಟು ಜನರು ಸಂಕಷ್ಟದ ಜೀವನವನ್ನು ಸಾಗಿಸುವಂತಾಯಿತು. 'ಐತಿಹಾಸಿಕ' ಅಸಮಾನತೆಯನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರವು 2008ರಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ, 2006ರನ್ನು ಜಾರಿಗೊಳಿಸಲಾಯಿತು. ಪ್ರಸ್ತುತ ಲೇಖನದಲ್ಲಿ ಬುಡಕಟ್ಟು ಸಮುದಾಯದ ಆರ್ಥಿಕ ಜೀವನದ ಮೇಲೆ ಅರಣ್ಯ ಹಕ್ಕು ಕಾಯ್ದೆಯ ಪರಿಣಾಮವೇನು ಎಂಬುದನ್ನು ವಿಮರ್ಶಿಸಲಾಗಿದೆ.*

***ಮುಖ್ಯಪದಗಳು: (Keywords)*** *ಸಮುದಾಯ, ಅರಣ್ಯವಾಸಿ, ಅರಣ್ಯ ಹಕ್ಕು ಕಾಯ್ದೆ–2006, ಆರ್ಥಿಕ ಜೀವನ.*

## ಪೀಠಿಕೆ

ಅರಣ್ಯ ಹಕ್ಕು ಕಾಯಿದೆ ಎನ್ನುವಂತಹುದನ್ನು ತಲತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅಂದರೆ ಅವರ ಹಕ್ಕುಗಳನ್ನು ದಾಖಲಿಸಿರದ ಅರಣ್ಯವಾಸಿ ಅನುಸೂಚಿ ಬುಡಕಟ್ಟುಗಳು ಮತ್ತು ಇತರ

*Please cite this article as: ಕುಮಾರಸ್ವಾಮಿ. ಎ.ಎನ್. ಮತ್ತು ಪ್ರೊ.ಅನ್ನಪೂರ್ಣ. ಎಂ.* (2022). ಬುಡಕಟ್ಟು ಸಮುದಾಯದ ಆರ್ಥಿಕ ಜೀವನದ ಮೇಲೆ ಅರಣ್ಯ ಹಕ್ಕು ಕಾಯ್ದೆಯ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 114–121.*

ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಮತ್ತು ಅಧಿಭೋಗವನ್ನು ಮಾನ್ಯ ಮಾಡಲು ಮತ್ತು ನಿಹಿತಗೊಳಿಸಲು ಹಾಗೂ ಹಾಗೆ ನಿಹಿತಗೊಳಿಸಿದಾಗ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದಂತಹ ಮಾನ್ಯತೆಗೆ ಹಾಗೂ ನಿಹಿತಗೊಳಿಸಿದ ಅಗತ್ಯವಾದ ಸಾಕ್ಷ್ಯದ ಸ್ವರೂಪವನ್ನು ದಾಖಲಾಗಿಸುವುದಕ್ಕಾಗಿ ನಿರ್ಧಿಷ್ಟ ರೂಪರೇಷೆಗೆ ಅವಕಾಶ ಕಲ್ಪಿಸುವ ಅಧಿನಿಯಮ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. (ಚಾಮರಾನಗರ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ–2015)

ಈ ಯೋಜನೆ ಅಡಿ ಗ್ರಾಮ ಅಥವಾ ಪೊಡು ಮಟ್ಟದಲ್ಲಿ ಅರಣ್ಯ ಹಕ್ಕು ಸಮಿತಿಗಳು ಹಾಗೂ ಅದರ ಉಪವಿಭಾಗ ಮತ್ತು ಜಿಲ್ಲಾ ಮಟ್ಟದಲ್ಲಿ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳ ಮುಖೇನ ಬುಡಕಟ್ಟು ಜನರಿಗೆ ವ್ಯವಸಾಯದ ಭೂಮಿಯನ್ನು ನೀಡುವುದು, ಅರಣ್ಯದಲ್ಲಿ ಕಿರು ಆಹಾರ ಉತ್ಪನ್ನಗಳನ್ನು ಸಂಗ್ರಹಿಸುವುದು ಮತ್ತು ಮಾರಾಟ ಮಾಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ. ಬುಡಕಟ್ಟು ಜನರು ಅರಣ್ಯದೊಳಗಿನ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವ ಹಕ್ಕನ್ನು ಸಹ ಹೊಂದಿರುತ್ತಾರೆ. ಅಂದರೆ ಗ್ರಾಮದ ಒಳಗೆ ಅಥವಾ ಹೊರಗೆ ಅರಣ್ಯದಲ್ಲಿ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅವುಗಳನ್ನು ಬಳಸುವ ಮತ್ತು ವಿಲೇವಾರಿ ಮಾಡುವ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಜಲ ಮೂಲಗಳಲ್ಲಿ ಜಮೀನು ಮತ್ತು ಇತರ ಉತ್ಪನ್ನಗಳನ್ನು ಬಳಸುವ ಅಥವಾ ಅವುಗಳನ್ನು ಹೊಂದುವ, ಜಾನುವಾರುಗಳನ್ನು ಮೇಯಿಸುವ ಮತ್ತು ಅಲೆಮಾರಿ ಅಥವಾ ಗ್ರಾಮ ಸಮುದಾಯಗಳಿಗೆ ಇರುವ ಪಾರಂಪರಿಕ ಋತುಕಾಲಿಕ ಸಂಪನ್ಮೂಲಗಳನ್ನು ಹೊಂದುವ ಇತರೆ ಹಕ್ಕುಗಳನ್ನು ಹೊಂದಬಹುದಾಗಿದೆ ಮತ್ತು ಸುಸ್ಥಿರ ಬಳಕೆಗಾಗಿ ಸಮುದಾಯವು ಪಾರಂಪರಿಕವಾಗಿ ರಕ್ಷಿಸುತ್ತಿರುವ ಯಾವುದೇ ಸಮುದಾಯದ ಅರಣ್ಯ ಸಂಪನ್ಮೂಲಗಳನ್ನು ರಕ್ಷಿಸುವ, ಪುನರ್ ಉತ್ಪಾದಿಸುವ ಅಥವಾ ನಿರ್ವಹಣೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಇದಲ್ಲದೆ ಜೈವಿಕ ಅರ್ಹತೆಯ ಹಕ್ಕು ಮತ್ತು ಸಾಂಸ್ಕೃತಿಕ ವೈವಿಧ್ಯತೆ ಹಕ್ಕು, ಬೌದ್ಧಿಕ ಆಸ್ತಿ ಮತ್ತು ಪಾರಂಪರಿಕ ಜ್ಞಾನಕ್ಕೆ ಇರುವ ಸಾಮುದಾಯಿಕ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಅವರು ಪವಿತ್ರ ಸ್ಥಳಗಳಲ್ಲಿ ಪೂಜಿಸುವ, ಭೇಟಿ ನೀಡುವ ಹಾಗೂ ಆರಾಧಿಸುವ ಹಕ್ಕನ್ನು ಹೊಂದಿರುತ್ತಾರೆ. ಈ ಕಾಯ್ದೆ ಅತಿ ವೈಯಕ್ತವಾಗಿ ಮತ್ತು ಅರಣ್ಯ ಹಕ್ಕುಗಳ ಸಮಿತಿಗೆ ಸಾಮುದಾಯಿಕ ಅರಣ್ಯಗಳನ್ನು ನೀಡಬೇಕಾಗಿರುತ್ತದೆ.

ಒಟ್ಟಾರೆ ಹೇಳುವುದಾದರೆ ಬುಡಕಟ್ಟು ಜನರ ಪಾರಂಪರಿಕ ಹಕ್ಕುಗಳನ್ನು ಸಂರಕ್ಷಿಸುವ ಹಾಗೂ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಗೊಳಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಮತ್ತು ಅವರ ಪಾರಂಪರಿಕ ಹಕ್ಕುಗಳನ್ನು ಮಾನ್ಯ ಮಾಡಿ ಸಂರಕ್ಷಿಸುವುದು ಈ ಕಾಯ್ದೆಯ ಪ್ರಮುಖವಾದ ಉದ್ದೇಶವಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿ ಇದ್ದು ಮೂಲವಾಸಿ ಬುಡಕಟ್ಟು ಗಿರಿಜನರಾದ ಸೋಲಿಗರು, ಕಾಡು ಕುರುಬರು ಮತ್ತು ಜೇನು ಕುರುಬರು ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಶತ ಶತಮಾನಗಳಿಂದಲೂ ವಾಸ ಮಾಡುತ್ತಿದ್ದಾರೆ, ಯಳಂದೂರು 10, ಕೊಳ್ಳೇಗಾಲ 80, ಚಾಮರಾಜನಗರ 25 ಮತ್ತು ಗುಂಡ್ಲುಪೇಟೆ 34 ಪೋಡು/ಕಾಲೋನಿಗಳಲ್ಲಿ ಒಟ್ಟು 149 ಪೋಡು/ಕಾಲೋನಿಗಳ ಸುಮಾರು

45,000 ಮೂಲವಾಸಿಗಳು ವಾಸ ಮಾಡುತ್ತಿದ್ದಾರೆ. ಮೂಲವಾಸಿಗಳು ಅರಣ್ಯ ಮೇಲೆ ಅವಲಂಬಿತರಾಗಿ ದಿನ ನಿತ್ಯಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಮತ್ತು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ನಡೆಸುವುದರೊಟ್ಟಿಗೆ ಸರ್ಕಾರ ನೀಡಿರುವ ಭೂಮಿಯಲ್ಲಿ ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದಾರೆ.

**ಅಧ್ಯಯನದ ಉದ್ದೇಶಗಳು**

1. ಅರಣ್ಯ ಹಕ್ಕು ಕಾಯ್ದೆಯ ಮಹತ್ವನ್ನು ತಿಳಿಯುವುದು.
2. ಬುಡಕಟ್ಟು ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಅರಣ್ಯಹಕ್ಕು ಕಾಯ್ದೆಯ ಪರಿಣಾವನ್ನು ಅಧ್ಯಯನ ಮಾಡುವುದು.

**ಅಧ್ಯಯನ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಮಾನವಶಾಸ್ತ್ರೀಯ ಸಂಶೋಧನಾ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಅವಲೋಕನ ವಿಧಾನ, ಸಂದರ್ಶನ ವಿಧಾನ, ಸಂದರ್ಶನ ಅನುಸೂಚಿ, ಪ್ರಕರಣ/ಪ್ರಸಂಗ ಅಧ್ಯಯನ, ಕುಟುಂಬ ಸಮೀಕ್ಷೆ, ಗುಂಪು ಚರ್ಚೆ, ಮುಂತಾದ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ.

ಮಾಧ್ಯಮಿಕ ಮಾಹಿತಿಯನ್ನು ರಾಜ್ಯ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಜಿಲ್ಲಾ ಆರ್ಥಿಕ ಮತ್ತು ಸಾಂಖ್ಯಿಕ ಕಛೇರಿ, ವಿವಿಧ ಗ್ರಂಥಾಲಯ ಹಾಗೂ ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ದೊರೆಯುವ ದಾಖಲೆಗಳು, ವರದಿಗಳು, ಪ್ರಕಟಿತ ಗ್ರಂಥಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಲೇಖನಗಳು ಮತ್ತು ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಮಾದರಿ ವಿಧಾನ**


ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯಲ್ಲಿ 2055 ಅನುಸೂಚಿತ ಬುಡಕಟ್ಟು ಕುಟುಂಬಗಳಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕು ಪತ್ರ ಸಿಕ್ಕಿದ್ದು, ಪ್ರಸ್ತುತ ಅಧ್ಯಯನಕ್ಕೆ ಒಟ್ಟು ಫಲಾನುಭವಿಗಳಲ್ಲಿ ಸರಳ ಯಾದೃಚ್ಛಿಕ ಮಾದರಿಯಲ್ಲಿ ಶೇ.20ರಷ್ಟು ಫಲಾನುಭವಿಗಳನ್ನು ಅಂದರೆ 411 ಫಲಾನುಭವಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಫಲಿತಾಂಶ ಮತ್ತು ಚರ್ಚೆಗಳು**

**ಕೋಷ್ಟಕ 1: ಅರಣ್ಯ ಹಕ್ಕು ಕಾಯಿದೆಯ ಫಲಾನುಭವಿಗಳ ಲಿಂಗ ವಿವರ**

| ಲಿಂಗ | ಆವೃತ್ತಿ | ಶೇಕಡವಾರು |
|---|---|---|
| ಪುರುಷ | 368 | 89.5 |
| ಮಹಿಳೆ | 43 | 10.5 |
| ಒಟ್ಟು | 411 | 100.0 |

**ಗ್ರಾಫ್ 1: ಅರಣ್ಯ ಹಕ್ಕು ಕಾಯಿದೆಯ ಫಲಾನುಭವಿಗಳ ಲಿಂಗ ವಿವರ**




ಕೋಷ್ಟಕ 1ರಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರವ ಫಲಾನುಭವಿಗಳ ಲಿಂಗದ ವಿವರವನ್ನು ನೀಡಲಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗವು ಕೂಡ ಪ್ರಮುಖವಾದ ಪಾತ್ರವಹಿಸುತ್ತದೆ. ಈ ಹಿನ್ನಲೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರತಿಕ್ರಿಯಾರ್ಥಿಗಳ ಲಿಂಗವನ್ನು ಪರಿಶೀಲಿಸಲಾಗಿದೆ. ಕೋಷ್ಟಕ ಪ್ರಕಾರ ಒಟ್ಟು ಫಲಾನುಭವಿಗಳಲ್ಲಿ ಶೇ.89.ರಷ್ಟು ಪುರುಷರಿದ್ದು, ಶೇ.10.5ರಷ್ಟು ಮಹಿಳೆಯರಿದ್ದಾರೆ.

**ಕೋಷ್ಟಕ 2: ಆರ್ಥಿಕ ಅಂಶಗಳ ಮೇಲೆ ಅರಣ್ಯ ಹಕ್ಕು ಕಾಯ್ದೆಯ ಪರಿಣಾಮ**

| ವಿವರ | | ಬಲವಾಗಿ ಒಪ್ಪುತ್ತೇನೆ | ಒಪ್ಪುತ್ತೇನೆ | ಸಾಧಾರಣವಾಗಿ ಒಪ್ಪುತ್ತೇನೆ | ಒಪ್ಪುವುದಿಲ್ಲ | ಒಟ್ಟು |
|---|---|---|---|---|---|---|
| ಸ್ವತಂತ್ರವಾಗಿ ವ್ಯವಸಾಯ ಮಾಡಲು ಅನುಕೂಲವಾಗಿದೆ | ಆವೃತ್ತಿ | 212 | 110 | 64 | 25 | 411 |
| | ಶೇಕಡವಾರು | 51.6 | 26.8 | 15.6 | 6.1 | 100.0 |
| ಪ್ರಾಣಿ ಸಾಕಾಣಿಕೆಗೆ ಅನುಕೂಲವಾಗಿದೆ | ಆವೃತ್ತಿ | 126 | 189 | 71 | 25 | 411 |
| | ಶೇಕಡವಾರು | 30.7 | 46.0 | 17.3 | 6.1 | 100.0 |
| ಕಿರು–ಉತ್ಪನ್ನ ಸಂಗ್ರಹಿಸಲು ಅನುಕೂಲವಾಗಿದೆ | ಆವೃತ್ತಿ | 141 | 143 | 108 | 19 | 411 |
| | ಶೇಕಡವಾರು | 34.3 | 34.8 | 26.3 | 4.6 | 100.0 |

| | | | | | | |
|---|---|---|---|---|---|---|
| ಆದಾಯದಲ್ಲಿ ಹೆಚ್ಚಳವಾಗಿದೆ | ಆವೃತ್ತಿ | 87 | 118 | 129 | 77 | 411 |
| | ಶೇಕಡವಾರು | 21.2 | 28.7 | 31.4 | 18.7 | 100.0 |
| ಕುಟುಂಬ ನಿರ್ವಹಣೆಗೆ ಸುಲಭವಾಗಿದೆ | ಆವೃತ್ತಿ | 18 | 74 | 108 | 211 | 411 |
| | ಶೇಕಡವಾರು | 4.4 | 18.0 | 26.3 | 51.3 | 100.0 |
| ಮನೆ ನಿರ್ಮಿಸಲು ತೊಂದರೆಯಿಲ್ಲ | ಆವೃತ್ತಿ | 37 | 68 | 168 | 138 | 411 |
| | ಶೇಕಡವಾರು | 9.0 | 16.5 | 40.9 | 33.6 | 100.0 |
| ನಿರುದ್ಯೋಗ ನಿವಾರಣೆಯಾಗಿದೆ | ಆವೃತ್ತಿ | 16 | 28 | 81 | 286 | 411 |
| | ಶೇಕಡವಾರು | 3.9 | 6.8 | 19.7 | 69.6 | 100.0 |
| ಸಾಲ ಪಡೆದುಕೊಳ್ಳಲು ಅನುಕೂಲವಾಗಿದೆ | ಆವೃತ್ತಿ | 32 | 64 | 89 | 226 | 411 |
| | ಶೇಕಡವಾರು | 7.8 | 15.6 | 21.7 | 55.0 | 100.0 |
| ಸರ್ಕಾರಿ ಸವಲತ್ತುಗಳನ್ನು ಪಡೆದು ಕೊಳ್ಳಲು ಅನುಕೂಲವಾಗಿದ | ಆವೃತ್ತಿ | 44 | 75 | 106 | 186 | 411 |
| | ಶೇಕಡವಾರು | 10.7 | 18.2 | 25.8 | 45.3 | 100.0 |
| ಮಕ್ಕಳಿಗೆ ಶಿಕ್ಷಣ ಕೊಡಿಸಲು ಅನುಕೂಲವಾಗಿದೆ | ಆವೃತ್ತಿ | 37 | 81 | 114 | 179 | 411 |
| | ಶೇಕಡವಾರು | 9.0 | 19.7 | 27.7 | 43.6 | 100.0 |
| ವೆಚ್ಚದಲ್ಲಿ ಬದಲಾವಣೆಯಾಗಿದೆ | ಆವೃತ್ತಿ | 61 | 101 | 126 | 123 | 411 |
| | ಶೇಕಡವಾರು | 14.8 | 24.6 | 30.7 | 29.9 | 100.0 |

ಕೋಷ್ಟಕ 2ರಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಿಂದಾಗಿ ಕುಟುಂಬದ ಆರ್ಥಿಕ ಅಂಶಗಳ ಮೇಲಾಗಿರುವ ಪರಿಣಾಮವನ್ನು ತೋರಿಸಲಾಗಿದೆ. ಕೋಷ್ಟಕದಲ್ಲಿ ಆರ್ಥಿಕತೆಗೆ ಸಂಬಂಧಿಸಿದಂತೆ ವಿವಿಧ ಅಂಶಗಳ ಬಗ್ಗೆ ಫಲಾನುಭವಿಗಳ ಅಭಿಪ್ರಾಯವನ್ನು ನೀಡಲಾಗಿದೆ. ಆರ್ಥಿಕತೆ ಪ್ರಮುಖ ಅಂಶಗಳಲ್ಲಿ ಒಂದಾದ ವ್ಯವಸಾಯ ಕುರಿತು ಶೇ.51.6ರಷ್ಟು ಫಲಾನುಭವಿಗಳು ಅರಣ್ಯ ಹಕ್ಕು ಕಾಯಿದೆಯಿಂದಾಗಿ ಸ್ವತಂತ್ರವಾಗಿ ವ್ಯವಸಾಯ ಮಾಡಲು ಅನುಕೂಲವಾಗಿದೆ ಎಂಬುದನ್ನು ಬಲವಾಗಿ ಒಪ್ಪುತ್ತೇನೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಶೇ.26.8 ಒಪ್ಪುತ್ತೇನೆ ಎಂದೂ, ಶೇ.15.6 ಸಾಧಾರಣವಾಗಿ

ಒಪ್ಪುತ್ತೇನೆ ಎಂದೂ, ಶೇ.6.1ರಷ್ಟು ಫಲಾನುಭಿಗಳು ಒಪ್ಪುವುದಿಲ್ಲ ಎಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಚಟುವಟಿಕೆಗಳಲ್ಲಿ ಮತ್ತೊಂದು ಪ್ರಮುಖ ಅಂಶವಾದ ಪ್ರಾಣಿಸಾಕಾಣಿಕೆ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.30.7ರಷ್ಟು ಫಲಾನುಭವಿಗಳು ಪ್ರಾಣಿ ಸಾಕಾಣಿಕೆಗೆ ಅನುಕೂಲವಾಗಿದೆ ಎಂಬ ಅಂಶವನ್ನು ಬಲವಾಗಿ ಒಪ್ಪುತ್ತೇನೆ ಎಂದು ಹೇಳಿದ್ದರೆ, ಶೇ.46.0 ಒಪ್ಪುತ್ತೇನೆ ಎಂದೂ, ಶೇ.17.3 ಸಾಧಾರಣವಾಗಿ ಒಪ್ಪುತ್ತೇನೆ ಎಂದೂ, ಶೇ.6.1 ಒಪ್ಪುವುದಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕಿರು–ಉತ್ಪನ್ನ ಸಂಗ್ರಹಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಅಭಿಪ್ರಾಯವನ್ನು ಕೇಳಿದಾಗ ಅರಣ್ಯ ಹಕ್ಕು ಕಾಯ್ದೆಯಿಂದ ಕಿರುಉತ್ಪನ್ನ ಸಂಗ್ರಹಿಸಲು ಅನುಕೂಲವಾಗಿದೆ ಎಂಬುದನ್ನು ಶೇ.34.3ರಷ್ಟು ಫಲಾನುಭವಿಗಳು ಬಲವಾಗಿ ಒಪ್ಪಿದ್ದೂ, ಶೇ.34.8 ತಮ್ಮ ಪೂರ್ಣ ಒಪ್ಪಿಗೆಯನ್ನು ಹಾಗೂ ಶೇ.26.3 ಸಾಧಾರಣವಾಗಿ ಒಪ್ಪಿಗೆ ಇದೆಯೆಂದೂ ಹಾಗೂ 19.0 ಒಪ್ಪುವುದಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಅರಣ್ಯ ಹಕ್ಕು ಕಾಯ್ದೆಯಿಂದಾಗಿ ಆದಾಯದಲ್ಲಿ ಹೆಚ್ಚಳವಾಗಿದೆ ಎಂಬ ಅಭಿಪ್ರಾಯವನ್ನು ಶೇ.21.2ರಷ್ಟು ಪಲಾನುಭವಿಗಳು ಬಲವಾಗಿ ಒಪ್ಪುತ್ತೇವೆ ಎಂದು ಹೇಳಿದರೆ, ಶೇ.28.7 ಪೂರ್ಣ ಪ್ರಮಾಣದಲ್ಲಿ ಒಪ್ಪಿಗೆಯಿದೆ ಎಂದೂ, ಶೇ.31.4ರಷ್ಟು ಸಾಧಾರಣವಾಗಿ ಒಪ್ಪುತ್ತೇನೆ ಎಂದು ಹೇಳಿದರೆ ಶೇ.18.7ರಷ್ಟು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ.

ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಿಂದಾಗಿ ಕುಟುಂಬ ನಿರ್ವಹಣೆಗೆ ಸುಲಭವಾಗಿದೆ ಎಂಬ ಅಭಿಪ್ರಾಯವನ್ನು ಶೇ.4.4ರಷ್ಟು ಫಲಾನುಭವಿಗಳು ಬಲವಾಗಿ ಒಪ್ಪುತ್ತೇವೆ ಎಂದೂ, ಶೇ.18.0ರಷ್ಟು ಪೂರ್ಣಪ್ರಮಾಣದಲ್ಲಿ ಒಪ್ಪಿಗೆ ಇದೆಯೆಂದೂ, ಶೇ.26.3ರಷ್ಟು ಸಾಧಾರಣವಾಗಿ ಒಪ್ಪಿಗೆಯಿದೆ ಎಂದು ಹೇಳಿದರೆ, ಶೇ.51.3ರಷ್ಟು ಫಲಾನುಭವಿಗಳು ಈ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ.

ಅರಣ್ಯ ಹಕ್ಕು ಕಾಯಿದೆಯಡಿ ತಮ್ಮ ಮೂಲ ಸ್ಥಳಗಳಲ್ಲಿ ವಾಸಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಈ ಹಿನ್ನಲೆಯಲ್ಲಿ ಕಾಯ್ದೆಯ ಜಾರಿಯ ನಂತರ ಮನೆ ನಿರ್ಮಿಸಲು ತೊಂದರೆಯಿಲ್ಲ ಎಂಬ ಅಭಿಪ್ರಾಯವನ್ನು ಶೇ.9.0ರಷ್ಟು ಫಲಾನುಭವಿಗಳು ಬಲವಾಗಿ ಒಪ್ಪುತ್ತೇವೆ ಎಂದು ಹೇಳಿದರೆ ಶೇ.40.6ರಷ್ಟು ಫಲಾನುಭವಿಗಳು ಸಾಧಾರಣವಾಗಿ ಒಪ್ಪಿಗೆ ಸೂಚಿಸಿದ್ದಾರೆ. ಆದರೆ ಶೇ.33.6ರಷ್ಟು ಫಲಾನುಭವಿಗಳು ಈ ಅಭಿಪ್ರಾಯಕ್ಕೆ ಯಾವುದೇ ಒಪ್ಪಿಗೆಯನ್ನು ಸೂಚಿಸಿಲ್ಲ. ಉದ್ಯೋಗವು ವ್ಯಕ್ತಿ ಅಥವ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ನಿರ್ಧರಿಸುವಲ್ಲಿ ಪ್ರಮುಖಪಾತ್ರವಹಿಸುತ್ತದೆ. ಅರಣ್ಯ ಹಕ್ಕು ಜಾರಿಯಾದ ಮೇಲೆ ನಿರುದ್ಯೋಗ ನಿವಾರಣೆಯಾಗಿದೆ ಎಂಬ ಅಭಿಪ್ರಾಯದ ಬಗ್ಗೆ ಅತ್ಯಂತ ಹೆಚ್ಚಿನ ಫಲಾನುಭವಿಗಳು ಒಪ್ಪಿಗೆ ಸೂಚಿಸಿಲ್ಲ. ಇನ್ನುಳಿದಂತೆ ಶೇ.19.7ರಷ್ಟು ಫಲಾನುಭವಿಗಳು ಸಾಧಾರಣವಾಗಿ ಒಪ್ಪಿಗೆಯಿದೆ ಎಂದು ಹೇಳಿದ್ದಾರೆ.

ಬಡತನದಿಂದಲೇ ಜೀವನ ದೂಡುವ ಅರಣ್ಯವಾಸಿ ಬುಡಕಟ್ಟುಗಳಿಗೆ ಸಾಲ ಮಾಡುವುದು ಅನಿವಾರ್ಯವಾಗಿರುತ್ತದೆ. ಆದರೆ ಯಾವುದೇ ಆಧಾರ ಇಲ್ಲದ ಕಾರಣ ಸಾಲ ನೀಡಲು ಯಾರು ಮುಂದೆ

ಬರುವುದಿಲ್ಲ. ಈ ಹಿನ್ನಲೆಯಲ್ಲಿ ಅರಣ್ಯ ಹಕ್ಕು ಕಾಯಿದೆಯಿಂದ ಸಾಲ ಪಡೆದುಕೊಳ್ಳಲು ಅನುಕೂಲವಾಗಿದೆ ಎಂಬ ಅಭಿಪ್ರಾಯವನ್ನು ಶೇ.55.0ರಷ್ಟು ಫಲಾನುಭವಿಗಳು ಒಪ್ಪಿಲ್ಲ. ಇನ್ನುಳಿದಂತೆ ಶೇ.21.7ರಷ್ಟು ಸಾಧಾರಣವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಅರಣ್ಯ ಹಕ್ಕು ಕಾಯ್ದೆಯಿಂದಾಗಿ ಸರ್ಕಾರಿ ಸವಲತ್ತುಗಳನ್ನು ಪಡೆದುಕೊಳ್ಳಲು ಅನುಕೂಲವಾಗಿದೆ ಎಂಬ ಅಭಿಪ್ರಾಯವನ್ನು ಶಶೇ.45.3ರಷ್ಟು ಫಲಾನುಭವಿಗಳು ತಿರಸ್ಕರಿಸಿದ್ದಾರೆ. ಇನ್ನುಳಿದಂತೆ ಶೇ.25ರಷ್ಟು ಸಾಧಾರಣವಾಗಿ ಒಪ್ಪಿರುವುದನ್ನು ಕಾಣಬಹುದಾಗಿದೆ.

ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಿಂದಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸಲು ಅನುಕೂಲವಾಗಿದೆ ಎಂಬ ಅಭಿಪ್ರಾಯವನ್ನು ಶೇ.43.6ರಷ್ಟು ಫಲಾನುಭವಿಗಳು ಇಲ್ಲ ಎಂಬುದಾಗಿ ಹೇಳಿದ್ದಾರೆ. ಇನ್ನುಳಿಂದಂತೆ ಶೇ.27.7ರಷ್ಟು ಫಲಾನುಭವಿಗಳು ಸಾಧಾರಣ ಒಪ್ಪಿಗೆ ಇದೆ ಎಂದು ಹೇಳಿದ್ದಾರೆ.

ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಿಂದಾಗಿ ನಿತ್ಯದ ವೆಚ್ಚದಲ್ಲಿ ಬದಲಾಗಿದೆ ಎಂಬ ಅಭಿಪ್ರಾಯವನ್ನು ಶೇ.30.7ರಷ್ಟು ಫಲಾನುಭವಿಗಳು ಸಾಧಾರಣ ಒಪ್ಪಿಗೆಯಿದೆ ಎಂದೂ, 29.9 ಒಪ್ಪಿಗೆ ಇಲ್ಲ ಎಂಬುದಾಗಿ ಹೇಳಿದ್ದಾರೆ. ಇನ್ನುಳಿದಂತೆ 14.8ರಷ್ಟು ಫಲಾನುಭವಿಗಳು ಮಾತ್ರ ಬಲವಾಗಿ ಒಪ್ಪಿಗೆ ಇದೆ ಎಂಬುದಾಗಿ ಹೇಳಿದ್ದಾರೆ.

ಅರಣ್ಯ ಹಕ್ಕು ಕಾಯ್ದೆ ಬುಡಕಟ್ಟು ಜನರ ಬಾಳಿನಲ್ಲಿ ಆಶಾಕಿರವಾಗಿದೆ. ವೈಯಕ್ತಿಕ ಮತ್ತು ಸಾಮುದಾಯಿಕ ಹಕ್ಕು ಪತ್ರ ಪಡೆದ ಅರಣ್ಯ ವಾಸಿಗಳನ್ನು ಯಾವುದೇ ಕಾರಣಕ್ಕೂ ಇಲಾಖೆ ಒಕ್ಕಲೆಬ್ಬಿಸುವಂತಿಲ್ಲ. ಅರಣ್ಯ ವಾಸಿಗಳು ಮರಮುಟ್ಟುಗಳಲ್ಲದ ಕಿರು ಅರಣ್ಯ ಉತ್ಪನ್ನಗಳು ಅಂದರೆ, ಬಿದಿರು, ಜೇನು, ಮೇಣ ಅರಗು, ಔಷಧೀಯ ಸಸ್ಯಗಳು, ಗೆಡ್ಡೆ–ಗೆಣಸು ಸಂಗ್ರಹಿಸಲು ಹಾಗೂ ಅವುಗಳನ್ನು ಜೀವನೋಪಾಯಕ್ಕಾಗಿ ಹೊರಗೆ ಮಾರಾಟ ಮಾಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅರಣ್ಯ ವಾಸಿಗಳು ವಾಸ ಮಾಡುವುದಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಸ್ವತಃ ಸಾಗುವಳಿ ಮಾಡಲು ವೈಯಕ್ತಿಕ ಅಥವಾ ಸಮುದಾಯ ಅಧಿಭೋಗದ ಮೇರೆಗೆ ಅರಣ್ಯ ಜಮೀನನ್ನು ಹೊಂದುವ ಹಾಗೂ ಅಲ್ಲಿ ಜೀವಿಸುವ ಹಕ್ಕು ಪಡೆಯಲಿದ್ದಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಅರಣ್ಯ ಹಕ್ಕು ಕಾಯ್ದೆ–2006 ಅತ್ಯಂತ ಉಪಯುಕ್ತ ಕಾನೂನುಗಳಲ್ಲಿ ಒಂದಾಗಿದ್ದು, ಬುಡಕಟ್ಟು ಕುಟುಂಬಗಳಿಗೆ ವಾಸದ ಮನೆಗಳು, ಕುಡಿಯುವ ನೀರು, ರಸ್ತೆ, ವಿದ್ಯುತ್, ಸಮುದಾಯ ಭವನ, ಶಾಲೆ ನಿರ್ಮಿಸಿಕೊಳ್ಳುವಲ್ಲಿ ಅನುಕೂಲವಾಗಿದೆ. ಸಾಮುದಾಯಿಕ ಹಕ್ಕು ಪತ್ರ ಪಡೆದಿರುವ ಕುಟುಂಬಗಳು ಅಥವಾ ಹಾಡಿಯ ಜನರು ಕಾಡಿನಲ್ಲಿ ಕಿರು ಅರಣ್ಯ ಉತ್ಪನ್ನಗಳಾದ ಜೇನು, ನೆಲ್ಲಿಕಾಯಿ, ಪಾಚಿ, ಹುಣಸೆ ಹಣ್ಣು, ಮಾಗಳಿ ಬೇರು, ಕಸಪೊರಕೆ, ದೂಪ, ಸೀಗೆಕಾಯಿ, ಅಂಟುವಾಳ, ಅರಳೆ ಕಾಯಿ, ಬೆಲದ ಕಾಯಿ, ಬಿದಿರು, ಮಾವಿನ ಮಿಡಿ, ಮೀನುಗಾರಿಕೆ ಸಂಗ್ರಹಿಸಿ, ಸಂಸ್ಕರಿಸಿ ಮಾರಾಟ ಮಾಡುವುದಕ್ಕೆ ಅವಕಾಶವಿರುವುದ್ದರಿಂದ ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ.

**ಪರಾಮರ್ಶನಾ ಗ್ರಂಥಗಳು**


- Wilson C.A. and M. Rajesh. (2018). An Analysis on the Impact of Forest Right Act 2006 among the Tribal People in the District of Palakkadu, Kerala. *International Journal of Pure and Applied Mathematics.* 119 (15), 1659-1666
- Madhu Sarin. (2008). Righting the wrongs done to India's forest dwellers. arborvitae, The IUCN Forest Conservation Programme Newsletter, 36: 10-11.
- Pai, Ashok. (2015). Preface, 1-2. In Shomona Khanna, ed., Compendium of Judgements on the Forest Rights Act, 2007-2015, Ministry of Tribal Affairs, Government of India.
- Amisha Jain and Rama Sharma. (2015),=. The Indian Forest Rights Act, 2006: Salient Features, Scope and 2012 Amendment Rules, International Journal of Social Science and Humanities, Vol. 4, No. 2, pp. 095-108.
- Saxena. (2005). Development as destitution. Alternative economic survey 2005-06. Dis empowering masses. www.daanishbooks.com/.../Alternative Economic Survey, India Disempowering Masses.html.
- Sirisha Naidu. (2009). The individual versus the common in the recognition of Forest Rights Act, 2006. December 16.
- Srinivas M. N. (1987). Dominent Caste and other Essay's, Oxford University Press, New Delhi.
- Thurston E, (1909). Castes and Tribes of Southern India, Vol-III, Madras Govt. Press, Madras.